ದಿನಾಂಕಃ 04-04-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ- ಪ್ರತಿವಾದಿ ಪರಃ ಶ್ರೀ ಕೆ.ಎ.ಆರ್. ವಕೀಲರಿಂದಃ-

ಅಂಧ್ರಾಳು ಗ್ರಾಮ ಹಿರೇಮಗಳೂರಿನಿಂದ ಸುಮಾರು 50 ಕಿ.ಮೀ ದೂರದಲ್ಲಿ ಇದೆ. ಭೈರಮ್ಮ ಇವರ ತಂದೆಯ ಹೆಸರು ಸಿದ್ದಲಿಂಗಪ್ಪ. ಅವರನ್ನ ಅಂಧ್ರಾಳು ಗ್ರಾಮದಲ್ಲಿ ಹಳೆಯ ಚೇರ್ ಮೇನ್ ಎಂದು ಕರೆಯುತ್ತಾರೆ ಎಂದರೆ ಸಾಕ್ಷಿ ನನ್ನ ಅಜ್ಜ ಸಿದ್ದಲಿಂಗಪ್ಪ ಇವರ ಮಾವ ಬಸವೇಗೌಡ ಇವರನ್ನ ಹಳೆಯ ಚೇರ್ ಮೆನ್ ಎಂದು ಕರೆಯುತ್ತಿದ್ದರು ಎನ್ನುತ್ತಾರೆ. ಭೈರಮ್ಮ ಇವರಿಗೆ ಲಲಿತಮ್ಮ ಮತ್ತು  ಬಸಮ್ಮ ಎಂಬ ಸಹೋದರಿಯರು ಹಾಗೂ ಮರುಳಸಿದ್ದಪ್ಪ ಮತ್ತು ಬಸವರಾಜ್ ಎಂಬ ಸಹೋದರರು ಇದ್ದಾರೆ ಸರಿ. ಅವರುಗಳ ಪೈಕಿ ಯಾರು  ಜೀವಂತ ಇದ್ದಾರೆ ಮತ್ತು ಯಾರು ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಮರುಳಸಿದ್ದಪ್ಪ, ಬಸವರಾಜು ಮತ್ತು ಲಲಿತಮ್ಮ ಜೀವಂತ ಇದ್ದಾರೆ ಆದರೆ ಬಸಮ್ಮ ತೀರಿಕೊಂಡಿರುತ್ತಾರೆ ಎನ್ನುತ್ತಾರೆ. ಸಾಕ್ಷಿ ಮುಂದುವರಿದು ನನ್ನ ತಾಯಿ ಭೈರಮ್ಮ ಸಹ ತೀರಿಕೊಂಡಿರುತ್ತಾರೆ ಎನ್ನುತ್ತಾರೆ. ಸಿದ್ದಲಿಂಗಪ್ಪ ಇವರಿಗೆ ನಂಜಪ್ಪ ಎಂಬ ಸಹೋದರ ಇದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸಿದ್ದಲಿಂಗಪ್ಪ ಇವರು ತಮ್ಮ ಪಿತ್ರಾರ್ಜಿತ ಆಸ್ತಿಯಲ್ಲಿ ಹಿಸ್ಸೆ ಬರಬೇಕು ಎಂದು ಅರಸೀಕೆರೆ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು ಎಂದರೆ ಸರಿ.  ಸಿದ್ದಲಿಂಗಪ್ಪ ಇವರು ಯಾರ ವಿರುದ್ಧ ದಾವೆ ಹೂಡಿದ್ದರು ಎಂದರೆ ಸಾಕ್ಷಿ ನಂಜಪ್ಪ ಎನ್ನುವವರ ವಿರುದ್ಧ ಅರಸೀಕೆರೆ ನ್ಯಾಯಾಲಯದಲ್ಲಿ ಹಿಸ್ಸೆ ಕೋರಿ ದಾವೆ ಹೂಡಿದ್ದರು ಎನ್ನುತ್ತಾರೆ. ಅರಸೀಕೆರೆ ನ್ಯಾಯಾಲಯದಲ್ಲಿ ದಾವೆ ವಿಚಾರಣೆಗೆ

ಇದ್ದಾಗ ಸಿದ್ದಲಿಂಗಪ್ಪ ತೀರಿಕೊಂಡಿರುತ್ತಾರೆ ಎಂದರೆ ಸರಿ. ಸಿದ್ದಲಿಂಗಪ್ಪ ತೀರಿಕೊಂಡ ನಂತರ ಲಲಿತಮ್ಮ, ಭೈರಮ್ಮ, ಬಸಮ್ಮ, ಮರುಳಸಿದ್ದಯ್ಯ ಮತ್ತು ಬಸವರಾಜು ನಡೆಸಿಕೊಂಡು ಬಂದರು ಎಂದರೆ ಸರಿ. ಅರಸೀಕೆರೆ ನ್ಯಾಯಾಲಯದಲ್ಲಿ ಆದ ತೀರ್ಪಿನ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯಗಳಲ್ಲಿ ಮೇಲ್ಮನವಿ ನಡೆದಿವೆ ಎಂದರೆ ಸರಿ. ಅರಸೀಕೆರೆ ನ್ಯಾಯಾಲಯದಲ್ಲಿ ನಡೆಯುತ್ತಿದ್ದ ದಾವೆಯ ಸಂಬಂಧ ಮರುಳಸಿದ್ದಪ್ಪ ಮತ್ತು ಬಸವರಾಜು ಇವರ ಜೊತೆ ನಾನೂ ಸಹ ವಕೀಲರ ಕಛೇರಿಗೆ ಹೋಗುತ್ತಿದ್ದೆ ಎಂದರೆ ಸರಿ. ಸಿದ್ದಲಿಂಗಪ್ಪ ದಾಖಲು ಮಾಡಿದ್ದ ವಿಭಾಗ ವ್ಯಾಜ್ಯ ಸುಮಾರು 30 ರಿಂದ 35 ವರ್ಷಗಳ ಕಾಲ ನಡೆಯಿತು ಎಂದರೆ ಸರಿ. ವಿಭಾಗ ದಾವೆ ಇತ್ಯರ್ಥ ಆದ ನಂತರ ಅಳತೆಗೆ ಬಂದಾಗ ನಮಗೂ ಮತ್ತು ನಂಜಪ್ಪನ ವಾರಸುದಾರರಿಗೂ ವ್ಯಾಜ್ಯ ನಡೆಯಿತು ಎಂದರೆ ಸರಿ. ನಮಗೂ ಮತ್ತು ನಂಜಪ್ಪನ ವಾರಸುದಾರರಿಗೂ ಹಲವಾರು ವ್ಯಾಜ್ಯಗಳು ನಡೆದಿವೆ ಎಂದರೆ ಸರಿ.

ಲಲಿತಮ್ಮ ಈಕೆಯ ಗಂಡನ ಮನೆ ಕಡೂರು ತಾಲ್ಲೂಕು ಪಿಳ್ಳೇನಹಳ್ಳಿ ಗ್ರಾಮ ಎಂದರೆ ಸರಿ. ಲಲಿತಮ್ಮ ಮತ್ತು ಅವರ ಕುಟುಂಬಸ್ಥರು ತಮಗೆ ಸೇರಿದ ಟ್ರ್ಯಾಕ್ಟರ್ ಅನ್ನ ಜಕಂಗೊಳಿಸಿ ತಮ್ಮ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದು ನನ್ನ, ಮರುಳಸಿದ್ದಪ್ಪ ಮತ್ತು ಬಸವರಾಜ್ ರವರ ವಿರುದ್ಧ ಬಾಣಾವರ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲು ಮಾಡಿದ್ದರು ಎಂದರೆ ಸರಿಯಲ್ಲ. ನೀವು ಯಾವತ್ತಾದರೂ ಹಿರೇಮಗಳೂರು ಗ್ರಾಮದಲ್ಲಿ ವಾಸವಿದ್ದೀರಾ ಎಂದರೆ ಸಾಕ್ಷಿ ನನ್ನ ಬಾಲ್ಯಾವಸ್ಥೆಯಲ್ಲಿ ಇದ್ದಾಗ ನನ್ನ ತಾಯಿ ಜೊತೆ ಹಿರೇಮಗಳೂರಿಗೆ

ಬಂದು ವಾಸವಿದ್ದೆ ಎನ್ನುತ್ತಾರೆ. ಹಿರೇಮಗಳೂರು ಗ್ರಾಮದಲ್ಲಿ ಎಷ್ಟನೇ ಇಸವಿಯಿಂದ ಎಷ್ಟನೇ ಇಸವಿಯವರೆಗೆ ವಾಸವಿದ್ದೀರಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ನಾನು ಮತ್ತು ನನ್ನ ತಾಯಿ ಹಾಗೂ 1 ನೇ ಪ್ರತಿವಾದಿ ಒಟ್ಟಿಗೆ ಹಿರೇಮಗಳೂರು ಗ್ರಾಮದಲ್ಲಿ ಯಾವುದೇ ಕಾಲಕ್ಕೆ ವಾಸವಿದ್ದೆವು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ. ನಾನು, ನನ್ನ ತಾಯಿ ಮತ್ತು 1 ನೇ ಪ್ರತಿವಾದಿ ಅಂಧ್ರಾಳು ಗ್ರಾಮದಲ್ಲಿ ಒಟ್ಟಿಗೆ ವಾಸವಿದ್ದೆವು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ. ಭೈರಮ್ಮ ಮತ್ತು ನನ್ನ ತಾಯಿಯ ವಿವಾಹ ಯಾವ ದಿನಾಂಕದಂದು ನೆರವೇರಿದೆ ಎಂದು ನನಗೆ ಗೊತ್ತಿಲ್ಲ. ಭೈರಮ್ಮ ಮತ್ತು 1 ನೇ ಪ್ರತಿವಾದಿಯ ವಿವಾಹ ನೆರವೇರಿದೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ. 1 ನೇ ಪ್ರತಿವಾದಿ ಮಲ್ಲೇಶಪ್ಪ ಇವರು ನಿಮ್ಮನ್ನ ಶಾಲೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿದ್ದಾರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು 10 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದೇನೆ. ನಾನು ವಿದ್ಯಾಭ್ಯಾಸವನ್ನ ಅಂಧ್ರಾಳು ಗ್ರಾಮದಲ್ಲಿಯೇ ಮಾಡಿರುತ್ತೇನೆ. ನಾನು ಶಾಲೆಗೆ ಹೋಗುತ್ತಿದ್ದಾಗ 1 ನೇ ಪ್ರತಿವಾದಿ ಶಾಲೆ ಬಳಿ ಬಂದು ನನ್ನನ್ನ ಯಾವತ್ತೂ ಮಾತನಾಡಿಸಿಲ್ಲ. ನನ್ನನ್ನ ಶಾಲೆಗೆ ದಾಖಲು ಮಾಡಲು ನನ್ನ ಬಗ್ಗೆ ವಿವರವನ್ನ ಶಾಲಾ ಪ್ರಾಧಿಕಾರದವರಿಗೆ ನನ್ನ ತಾಯಿ ಭೈರಮ್ಮ ಮತ್ತು ನನ್ನ ಮಾವ ಮರುಳಸಿದ್ದಪ್ಪ ಕೊಟ್ಟಿರುತ್ತಾರೆ. ನನ್ನ ಶಾಲಾ ದಾಖಲಾತಿಗಳಲ್ಲಿ 1 ನೇ ಪ್ರತಿವಾದಿಯ ಸಹಿ ಎಲ್ಲಿಯೂ ಇಲ್ಲ. ನನ್ನ ಮದುವೆ ಮಾತುಕತೆಗಾಗಲೀ ಮತ್ತು ನನ್ನ ಮದುವೆಗಾಗಲೀ 1 ನೇ ಪ್ರತಿವಾದಿ ಮಲ್ಲೇಶಪ್ಪ ಬಂದಿಲ್ಲ. ನನ್ನ ಲಗ್ನಪತ್ರಿಕೆಯಲ್ಲಿ ಮತ್ತು ನನ್ನ ಶಾಲಾ

ದಾಖಲಾತಿಯಲ್ಲಿ ಹಿರೇಮಗಳೂರು ಮಲ್ಲೇಶಪ್ಪ ಎಂದು ದಾಖಲಾತಿ ಇದೆ. ನಿಪಿ-24 ರಲ್ಲಿ ನಿಮ್ಮ ತಂದೆಯ ಹೆಸರನ್ನ ಹಿರೇಮಗಳೂರು ಮಲ್ಲೇಶಪ್ಪ ಎಂದು ಬರೆದಿದೆಯಾ ಎಂದರೆ ಸಾಕ್ಷಿ ಹಿರೇಮಗಳೂರು ಎಂದು ಬರೆದಿಲ್ಲ ಆದರೆ ನನ್ನ ತಾಯಿಯ ಹೆಸರು ಭೈರಮ್ಮ ಮತ್ತು ನನ್ನ ತಂದೆಯ ಹೆಸರನ್ನ ಮಲ್ಲೇಶಪ್ಪ ಎಂದು ಬರೆಯಲಾಗಿದೆ ಎನ್ನುತ್ತಾರೆ. ನಿಪಿ-25 ರಿಂದ ನಿಪಿ-27 ರಲ್ಲಿಯೂ ಸಹ ನನ್ನ ತಂದೆ ಹೆಸರಿನ ಜೊತೆ ಹಿರೇಮಗಳೂರು ಎಂದು ಬರೆದಿಲ್ಲ ಎಂದರೆ ಸರಿ. ನನ್ನ ತಾಯಿ ತೀರಿಕೊಂಡ ಕಾಲಕ್ಕೆ ನಾನು ಪ್ರಾಪ್ತ ವಯಸ್ಕನಾಗಿದ್ದೆ. ನನ್ನ ತಾಯಿ ತೀರಿಕೊಂಡ ಕಾಲಕ್ಕೆ ಅವರ ಮರಣ ಪ್ರಮಾಣ ಪತ್ರವನ್ನ ಬರೆಯಲು ಸಂಬಂಧಪಟ್ಟ ಪ್ರಾಧಿಕಾರಕ್ಕೆ ನನ್ನ ಮಾವ ಮರುಳಸಿದ್ದಪ್ಪ ಮಾಹಿತಿ ಕೊಟ್ಟಿರುತ್ತಾರೆ. ನಿಪಿ-28 ರಲ್ಲಿಯೂ ಸಹ ನನ್ನ ತಂದೆ ಹೆಸರಿನ ಜೊತೆ ಹಿರೇಮಗಳೂರು ಎಂದು ಬರೆದಿಲ್ಲ ಎಂದರೆ ಸರಿ.

ನಿಪಿ-5 ನ್ನ ಪಡೆಯುವ ಉದ್ದೇಶದಿಂದ ಈ ದಾವೆ ಹೂಡಿದ 6 ತಿಂಗಳ ಮೊದಲು ಅರಸೀಕೆರೆ ತಾಲ್ಲೂಕು ಕಛೇರಿಯಲ್ಲಿ ಅರ್ಜಿ ಕೊಟ್ಟಿರುತ್ತೇನೆ. ನಿಪಿ-5 ನ್ನ ಪಡೆಯುವ ಉದ್ದೇಶದಿಂದ ಸಲ್ಲಿಸಿದ ಅರ್ಜಿ ಕಾಲಕ್ಕೆ 1 ನೇ ಪ್ರತಿವಾದಿಯ ಆಧಾರ್ ಕಾರ್ಡ್ ಅನ್ನ ನೋಡಿದ್ದೀರಾ ಎಂದರೆ ಸಾಕ್ಷಿ ನನ್ನ ತಂದೆ ಆಧಾರ್ ಕಾರ್ಡ್ ನನ್ನ ಬಳಿ ಇತ್ತು ಎನ್ನುತ್ತಾರೆ. ಸದರಿ ಆಧಾರ್ ಕಾರ್ಡ್ ಅನ್ನ ನಿಮಗೆ ಯಾರು ಕೊಟ್ಟರು ಎಂದರೆ ಸಾಕ್ಷಿ ನನ್ನ ತಂದೆಯ ಸಂಬಂಧಿಕರು ನನಗೆ ಕೊಟ್ಟರು ಎನ್ನುತ್ತಾರೆ. ನಿಪಿ-5 ನ್ನ ಪಡೆಯುವ ಕಾಲಕ್ಕೆ 1 ನೇ ಪ್ರತಿವಾದಿ ಅರಸೀಕೆರೆ ತಾಲ್ಲೂಕು ಕಛೇರಿಗೆ ಬಂದಿರಲಿಲ್ಲ. ನಿಪಿ-5 ಕ್ಕೆ ಸಂಬಂಧಿಸಿದಂತೆ 1 ನೇ ಪ್ರತಿವಾದಿ ಅರಸೀಕೆರೆ ಕಂದಾಯ ಕಛೇರಿಗೆ ಭೇಟಿ ನೀಡಿ ಯಾವುದೇ

ಹೇಳಿಕೆ ಕೊಟ್ಟಿಲ್ಲ. ನಿಪಿ-5 ರ ದಾಖಲಾತಿ 1 ನೇ ಪ್ರತಿವಾದಿಯ ಅನುಪಸ್ಥಿತಿಯಲ್ಲಿ ಆಗಿದೆ ಎಂದರೆ ಸರಿ. ನಿಪಿ-19 ರಿಂದ 21 ರ ದಾಖಲೆ ಅಸ್ತಿತ್ವಕ್ಕೆ ಬಂದ ಕಾಲಕ್ಕೆ ಮಲ್ಲೇಶಪ್ಪ ಹಾಜರಿರಲಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ಇವರ ಉಪಸ್ಥಿತಿಯಲ್ಲಿ ಯಾವುದೇ ದಾಖಲೆ ಬರೆದಿಲ್ಲ ಎಂದರೆ ಸರಿ. ನನ್ನ ತಾಯಿ ತೀರಿಕೊಂಡ ಕಾಲಕ್ಕೆ 1 ನೇ ಪ್ರತಿವಾದಿ ಬಂದಿರಲಿಲ್ಲ ಮತ್ತು ಅವರ ಶಿವಗಣರಾಧನೆಗೂ ಸಹ ಅವರ ಬಂದಿರಲಿಲ್ಲ.

ದಾವಾ ಅನುಸೂಚಿ ಬಿ ಸ್ವತ್ತು ರೈಲ್ವೆ ಇಲಾಖೆಗೆ ಭೂಸ್ವಾಧೀನ ಆಗಿದೆ ಎಂದರೆ ಸರಿ. ಈ ಆಸ್ತಿ ಸಂಬಂಧ ಪರಿಹಾರ ಮಂಜೂರಾಗಿರುವ ಬಗ್ಗೆ ದಾಖಲಾತಿಯನ್ನ ಯಾರು ಕೊಟ್ಟರು ಎಂದರೆ ಸಾಕ್ಷಿ ನಾನು ಮಾನ್ಯ ಉಪವಿಭಾಗಾಧಿಕಾರಿಗಳ ಕಛೇರಿಯಲ್ಲಿ ಪಡೆದಿದ್ದೇನೆ ಎನ್ನುತ್ತಾರೆ. ದಾವಾ ಸ್ವತ್ತುಗಳನ್ನ ನಾನು ನೋಡಿದ್ದೇನೆ. ಸದರಿ ಸ್ವತ್ತುಗಳನ್ನ ನಾನು ಯಾವುದೇ ಕಾಲಕ್ಕೂ ಉಳುಮೆ ಮಾಡಿಲ್ಲ. ದಾವಾ ಅನುಸೂಚಿ ಬಿ ಸ್ವತ್ತು ರೈಲ್ವೆ ಇಲಾಖೆಗೆ ಭೂಸ್ವಾಧೀನ ಆಗಿರುವ ವಿಚಾರ ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿ ಈ ದಾವೆ ಹೂಡಿದ 2 ವರ್ಷದ ಮೊದಲು ನನ್ನ ಗಮನಕ್ಕೆ ಬಂದಿರುತ್ತದೆ ಎನ್ನುತ್ತಾರೆ. ಈ ದಾವೆ ಹೂಡುವ ಮೊದಲು ದಾವಾ ಅನುಸೂಚಿ ಬಿ ಸ್ವತ್ತನ್ನ ನಾನು ನೋಡಿದ್ದೇನೆ. ಈ ದಾವೆ ಹೂಡುವ 2 ವರ್ಷ ಮೊದಲು ದಾವಾ ಅನುಸೂಚಿ ಬಿ ಸ್ವತ್ತು ರೈಲ್ವೆ ಇಲಾಖೆ ಸ್ವಾಧೀನದಲ್ಲಿ ಇರುವುದು ತಿಳಿಯಿತು. ದಾವಾ ಅನುಸೂಚಿ ಬಿ ಸ್ವತ್ತನ್ನ ಎಷ್ಟು ಬಾರಿ ಭೂಸ್ವಾಧೀನ ಮಾಡಲಾಗಿದೆ ಎಂದರೆ ಸಾಕ್ಷಿ ಒಮ್ಮೆಲೆ ಭೂಸ್ವಾಧೀನಪಡಿಸಿಕೊಳ್ಳಲಾಗಿದೆ ಎನ್ನುತ್ತಾರೆ. ನಾನು ದಾಖಲಾತಿಗಳನ್ನ ನೋಡಿದಾಗ ದಾವಾ ಸ್ವತ್ತುಗಳು 1 ಮತ್ತು 2 ನೇ

ಪ್ರತಿವಾದಿಗಳ ಜಂಟಿ ಹೆಸರಿನಲ್ಲಿ ಖಾತೆ ಇತ್ತು. 1 ಮತ್ತು 2 ನೇ ಪ್ರತಿವಾದಿಗಳ ಹೆಸರು ಗಂಗಮ್ಮ. ಗಂಗಮ್ಮ ಈಕೆ ತೀರಿಕೊಂಡಿರುತ್ತಾರೆ. ಗಂಗಮ್ಮ ತೀರಿಕೊಂಡ ಕಾಲಕ್ಕೆ ನಾನಾಗಲೀ, ನನ್ನ ಚಿಕ್ಕಪ್ಪರಂದಿರಾಗಲೀ ಅಥವಾ ನನ್ನ ಮಾವಂದಿರಾಗಲೀ ಶಿವಗಣರಾಧನೆ ಮಾಡಿದ್ದೀರಾ ಎಂದರೆ ಸಾಕ್ಷಿ ನಮಗೆ ಅವರು ತೀರಿಕೊಂಡ ವಿಚಾರವನ್ನ ತಿಳಿಸಿರಲಿಲ್ಲ ಎನ್ನುತ್ತಾರೆ. ಹಿರೇಮಗಳೂರು ಗ್ರಾಮದಲ್ಲಿ ನಿಮಗೆ ಬೇರೆ ಸಂಬಂಧಿಕರು ಇದ್ದಾರಾ ಎಂದರೆ ಸಾಕ್ಷಿ ಇದ್ದಾರೆ ಎನ್ನುತ್ತಾರೆ. 2 ನೇ ಪ್ರತಿವಾದಿ ತನ್ನ ತಾಯಿಯಿಂದ ಅಕ್ರಮವಾಗಿ ಹುಯಿಲು ಬರೆಸಿಕೊಂಡಿರುತ್ತಾರೆ ಎಂದು ಹೇಳಲಾದ ಕಾಲಕ್ಕೆ ನಾನು ಹಾಜರಿರಲಿಲ್ಲ. ಗಂಗಮ್ಮ ಇವರಿಂದ 2 ನೇ ಪ್ರತಿವಾದಿ ಒತ್ತಡ ಏರಿ ಮರಣ ಶಾಸನವನ್ನ ಬರೆಸಿಕೊಂಡಿರುತ್ತಾರೋ ಅಥವಾ ಅವರ ಸ್ವಇಚ್ಛೆಯಿಂದ ಹುಯಿಲು ಬರೆಯಲಾಗಿದೆ ಎಂದು ಹೇಳಲು ಆ ಕಾಲಕ್ಕೆ ನೀವು ಹಾಜರಿಲ್ಲದೇ ಇದ್ದುದರಿಂದ ಅದರ ಬಗ್ಗೆ ನಿಮಗೆ ಮಾಹಿತಿ ಇಲ್ಲ ಎಂದರೆ ಸರಿ, ಸಾಕ್ಷಿ ಮುಂದುವರಿದು ಮರಣಶಾಸನದಲ್ಲಿ ಸೇರಿಸಿರುವ ಆಸ್ತಿಗಳು ಪಿತ್ರಾರ್ಜಿತ ಆಸ್ತಿಯಾದ್ದರಿಂದ ಆಕೆಗೆ ಮರಣ ಶಾಸನ ಬರೆಯುವ ಹಕ್ಕು ಅಧಿಕಾರ ಹಿತಾಸಕ್ತಿ ಇರಲಿಲ್ಲ ಮತ್ತು ಸದರಿ ಮರಣ ಶಾಸನವನ್ನ ನನ್ನ ತಂದೆ ಗಮನಕ್ಕೆ ಬಾರದಂತೆ ಬರೆಸಿಕೊಂಡಿರುವುದರಿಂದ ಅದು ಮೋಸದ ಪತ್ರ ಎನ್ನುತ್ತಾರೆ. ನನ್ನ ಮರಣಶಾಸನದ ಸಂಬಂಧ ನನ್ನ ತಂದೆ ಬಳಿ ನಾನು ಯಾವತ್ತೂ ಮಾತನಾಡಿಲ್ಲ. ಸಾಕ್ಷಿ ಮುಂದುವರಿದು ನಾನು ಆಗ ಸಣ್ಣ ವಯಸ್ಸಿನವನು ಆದ್ದರಿಂದ ಅವರ ಜೊತೆ ಮಾತನಾಡಿಲ್ಲ ಎನ್ನುತ್ತಾರೆ. ಈ ದಾವೆ ಹೂಡುವ ಪೂರ್ವದಲ್ಲಿ ಮರಣ ಶಾಸನದ ಸಂಬಂಧ 1 ನೇ ಪ್ರತಿವಾದಿ ಬಳಿ ಚರ್ಚೆ

ಮಾಡಿದ್ದೇನೆ. ಆಗ 1 ನೇ ಪ್ರತಿವಾದಿ ಇವರು 2 ನೇ ಪ್ರತಿವಾದಿ ನನಗೆ ಮೋಸ ಮಾಡಿ ನನ್ನ ತಾಯಿಯಿಂದ ಹುಯಿಲು ಬರೆಸಿಕೊಂಡಿರುತ್ತಾನೆ ಅದನ್ನ ನ್ಯಾಯಾಲಯಕ್ಕೆ ಹೋಗಿ ಪ್ರಶ್ನೆ ಮಾಡೋಣ ಎಂದು ಹೇಳಿಲ್ಲ. ನಾನು ಮತ್ತು 1 ನೇ ಪ್ರತಿವಾದಿ ಈ ದಾವೆ ಹೂಡಿದ 6 ತಿಂಗಳು ಮೊದಲು ಮಾತನಾಡಿದ್ದೆವು. ಆ ರೀತಿ 1 ನೇ ಪ್ರತಿವಾದಿ ಜೊತೆ ಮಾತನಾಡಿದಾಗ ವಂಶವೃಕ್ಷ ಮಾಡಿಸುತ್ತಿದ್ದೇನೆ, ಕಂದಾಯ ಪ್ರಾಧಿಕಾರದ ಜೊತೆ ಮಾತನಾಡಿ ಹೇಳಿಕೆ ಕೊಡು ಎಂದು ಅವರನ್ನ ಕೇಳಿಲ್ಲ. ನಿಪಿ-16 ರ ದಾಖಲೆಯ ದೃಢೀಕರಣ ಪತ್ರವನ್ನ ನಾನೇ ತೆಗೆಸಿದ್ದೇನೆ. ನಿಪಿ-16 ನ್ನ ಪಡೆದ ಕಾಲಕ್ಕೆ ಗಂಗಮ್ಮ ಈಕೆಯ ಮರಣ ಪ್ರಮಾಣ ಪತ್ರವನ್ನ ಉಪನೊಂದಣಾಧಿಕಾರಿ ಕಛೇರಿಗೆ ಹಾಜರು ಮಾಡಿಲ್ಲ. ನಾನು ಅರಸೀಕೆರೆ ನ್ಯಾಯಾಲಯಕ್ಕೆ ದಾವೆಗೆ ಹಾಜರಾದಾಗ 1 ನೇ ಪ್ರತಿವಾದಿ ನನ್ನ ತಾಯಿಯನ್ನ ನಿರ್ಲಕ್ಷಿಸಿದ್ದಾರೆ ಅವರಿಂದ ಜೀವನಾಂಶ ಕೇಳಿ ಅರ್ಜಿ ಸಲ್ಲಿಸಿ ಎಂದು ವಕೀಲರ ಬಳಿ ಕೇಳಿಲ್ಲ. ಆ ರೀತಿ ನಾನು ವಕೀಲರನ್ನ ಭೇಟಿ ಮಾಡುತ್ತಿದ್ದಾಗ ನನ್ನ ತಂದೆ ವಿರುದ್ಧ ಆಸ್ತಿಯಲ್ಲಿ ಭಾಗಾಂಶ ಕೇಳಿ ದಾವೆ ಹೂಡಿ ಎಂದು ಕೇಳಿಲ್ಲ. 45 ವರ್ಷಗಳಿಂದ ಹಿರೇಮಗಳೂರಿಗೆ ಬಂದು ಒಂದು ದಿನವೂ ಸಹ ವಾಸವಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ನನಗೆ ಬುದ್ದಿ ಬಂದಾಗಿನಿಂದ ಹಿರೇಮಗಳೂರಿಗೆ ಬಂದು ವಾಸವಿಲ್ಲ ಎನ್ನುತ್ತಾರೆ. ನನ್ನ ತಾಯಿಗೂ ಮತ್ತು 1 ನೇ ಪ್ರತಿವಾದಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೂ ಮತ್ತು ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅವರು ನನ್ನ ಜನಕ ತಂದೆ ಎಂದರೆ ಸರಿಯಲ್ಲ. ನನ್ನ ಶಾಲಾ ದಾಖಲಾತಿಗಳಲ್ಲಿ ಬರೆಸಿರುವ ಮಲ್ಲೇಶಪ್ಪನಿಗೂ ಮತ್ತು 1 ನೇ

ಪ್ರತಿವಾದಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮತ್ತು ನನ್ನ ಶಾಲಾ ದಾಖಲಾತಿಯಲ್ಲಿ ಇರುವ ಮಲ್ಲೇಶಪ್ಪ ಬೇರೆ ಬೇರೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಓಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ2

ಓ.ಎಸ್.ನಂಃ 94/2023
ಪಿ.ಡಬ್ಲ್ಯೂಃ 1